ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೊವ್

11



ವಿಚಿತ್ರ ಸ್ಥಳದಲ್ಲಿ ಡನ್ನೋ





ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೊವ್ 11

ವಿಚಿತ್ರ ಸ್ಥಳದಲ್ಲಿ ಡನ್ನೋ

ಚಿತ್ರಗಳು: ಬೋರಿಸ್ ಕಲೌಶಿನ್


ಕನ್ನಡಕ್ಕೆ ಪ್ರಭಾಕರ ನಾನಾವಟಿ








ಡನ್ನೋನಿಗೆ ಎಚ್ಚರವಾದಾಗ, ತಾನು ಒಂದು ವಿಚಿತ್ರವಾದ ಕೋಣೆಯಲ್ಲಿದ್ದೇನೆ ಎಂದು ಅವನಿಗೆ ಅನ್ನಿಸಿತು. ದಿಂಬಿನೊಳಗೆ ಡ್ಯಾಂಡಿಲಿಯನ್ ಹೂವಿನ ಮೃದುವಾದ ಎಸಳುಗಳನ್ನು ತುಂಬಿದಂತಹ ಮೆತ್ತಗಿನ ಹಾಸಿಗೆಯಲ್ಲಿ ಅವನು ಮಲಗಿದ್ದನು. ಧ್ವನಿಗಳ ಸದ್ದಿನಿಂದ ಅವನು ಎಚ್ಚರಗೊಂಡಿದ್ದನು, ಮತ್ತು ಆ ಧ್ವನಿಗಳು ಎಲ್ಲಿಂದ ಬರುತ್ತಿವೆ ಎಂದು ನೋಡಲು ಸುತ್ತಲೂ ನೋಡಿದನು. ಕೋಣೆಯ ಮೂಲೆಗಳಲ್ಲಿ ಕುರ್ಚಿಗಳಿದ್ದವು, ಮತ್ತು ಗೋಡೆಗಳ ಮೇಲೆ ಹಾಸುಬಟ್ಟೆಗಳು ಹಾಗೂ ಹೂಗಳ ಚಿತ್ರಗಳನ್ನು ತೂಗು ಹಾಕಲಾಗಿತ್ತು. ಕಿಟಕಿಯ ಬಳಿ ಒಂದೇ ಕಾಲಿನ ಮೇಲೆ ನಿಂತಿದ್ದ ಮೇಜು ಇತ್ತು. ಆ ಮೇಜಿನ ಮೇಲೆ ಬಣ್ಣಬಣ್ಣದ ಕಸೂತಿ ರೇಷ್ಮೆ ದಾರಗಳ ರಾಶಿ, ಅದರೊಳಗಿಂದ ಮುಳ್ಳುಹಂದಿಯ ಮುಳ್ಳುಗಳಂತಿರುವ ಪಿನ್ನುಗಳು ಮತ್ತು ಸೂಜಿಗಳು ಹೊರಚಾಚಿದ್ದವು. ಅಲ್ಲಿ ಒಂದು ಚಿಕ್ಕ ಕಸೂತಿಯ ಬಟ್ಟೆ ಕೂಡ ಇತ್ತು. ಸ್ವಲ್ಪ ದೂರದಲ್ಲಿ ಲೇಖನ ಸಾಮಗ್ರಿಗಳಿದ್ದ ಒಂದು ಮೇಜಿತ್ತು. ಅದರ ಪಕ್ಕದಲ್ಲಿಯೇ ಒಂದು ಪುಸ್ತಕದ ಕಪಾಟಿತ್ತು.



ದೂರದ ಗೋಡೆಯ ಮೇಲೆ, ಬಾಗಿಲಿನ ಹತ್ತಿರ, ಒಂದು ದೊಡ್ಡ ಕನ್ನಡಿಯಿತ್ತು. ಇಬ್ಬರು ಪುಟ್ಟ ಮೈಟ್ಸ ಹುಡುಗಿಯರು ಕನ್ನಡಿಯ ಮುಂದೆ ನಿಂತುಕೊಂಡು ಮಾತನಾಡುತ್ತಿದ್ದರು. ಅವರಲ್ಲಿ ಒಬ್ಬಳು ಹಿಂದೆ ಬಿಲ್ಲಿನಂತೆ ಕಟ್ಟಿದ ರೇಷ್ಮೆಯ ಸ್ಕಾರ್ಫ್ ಇರುವ ನೀಲಿ ರೇಷ್ಮೆಯ ಉಡುಪನ್ನು ಧರಿಸಿದ್ದಳು. ಅವಳ ಕಣ್ಣುಗಳು ನೀಲಿಯಾಗಿದ್ದವು ಮತ್ತು ಅವಳು ಉದ್ದನೆಯ ಜಡೆಯಾಗಿ ಕಟ್ಟಿಕೊಂಡಿದ್ದ ಕಪ್ಪು ಕೂದಲುಗಳು ಇದ್ದವು. ಇನ್ನೊಂದು ಮೈಟ್ಸ ಹುಡುಗಿ ಗುಲಾಬಿ ಮತ್ತು ನೇರಳೆ ಬಣ್ಣದ ಹೂಗಳಿದ್ದ ಉಡುಪನ್ನು ಧರಿಸಿದ್ದಳು. ಅವಳ ಭುಜಗಳವರೆಗೆ ಇಳಿದಿದ್ದ ಸುರುಳಿಯಾಕಾರದ ಅಗಸೆಬಣ್ಣದ ಕೂದಲಿದ್ದವು. ಅವಳು ಒಂದು ಟೊಪ್ಪಿಗೆಯನ್ನು ತೊಟ್ಟು ಗುಬ್ಬಚ್ಚಿಯಂತೆ ಚಿಲಿಪಿಲಿಗುಟ್ಟುತ್ತಿದ್ದಳು:

“ಎಂಥಾ ಭಯಾನಕ ಟೊಪ್ಪಿಗೆ! ಅದನ್ನು ಹೇಗೆ ತೊಟ್ಟರೂ ಕುರೂಪವಾಗಿಯೇ ಕಾಣುತ್ತದೆ. ಅಗಲವಾದ ಅಂಚಿನ ಟೊಪ್ಪಿಗೆಯನ್ನು ನಾನೇ ಮಾಡಿಕೊಳ್ಳಬೇಕೆಂದಿದ್ದೆ, ಆದರೆ ಸಾಕಷ್ಟು ಸಾಮಗ್ರಿಗಳು ಇರಲಿಲ್ಲ, ಹಾಗಾಗಿ ಕಿರಿದಾದ ಅಂಚಿನ ಟೊಪ್ಪಿಗೆಯನ್ನೇ ಮಾಡಬೇಕಾಯಿತು ಮತ್ತು ಅದು ಯಾವಾಗಲೂ ನನ್ನ ಮುಖವನ್ನು ಚಂದ್ರನಂತೆ ದುಂಡಾಗಿ ಕಾಣುವಂತೆ ಮಾಡುತ್ತದೆ, ಅದು ತುಂಬಾ ಅಹಿತಕರ, ಅಲ್ಲವೇ?”
“ನೀನು ಈ ಕನ್ನಡಿಯ ಮುಂದೆ ನಿಂತು ಸಾಕಷ್ಟು ಹೊತ್ತಾಗಿದೆ," ಎಂದು ನೀಲಿಕಣ್ಣಿನ ಹುಡುಗಿ ಹೇಳಿದಳು. “ತಮ್ಮ ಸಮಯವನ್ನೆಲ್ಲ ಕನ್ನಡಿಯ ಮುಂದೆ ಕಳೆಯುವದನ್ನು ನಾನು ಸಹಿಸಲಾರೆ.”






“ ಕನ್ನಡಿ ಯಾವುದಕ್ಕಾಗಿ ಇರುತ್ತದೆ ಎಂದು ನೀನು ಎಂದಾದರು ಯೋಚಿಸಿದ್ದಿಯಾ?" ಅಗಸೆಬಣ್ಣದ ಕೂದಲಿನವಳು ಮುಂದುವರಿಸಿದಳು.

ಅವಳು ಟೊಪ್ಪಿಗೆಯನ್ನು ತನ್ನ ತಲೆಯ ತೀರ ಹಿಂಭಾಗಕ್ಕೆ ಹಾಕಿಕೊಂಡು, ಅದು ಹೇಗೆ ಕಾಣುತ್ತದೆ ಎಂದು ನೋಡಲು ಕಣ್ಣುಗಳನ್ನು ಕಿರಿದಾಗಿಸಿದಳು.

ಇದೆಲ್ಲ ಡನ್ನೋಗೆ ಬಹಳ ತಮಾಷೆಯಾಗಿ ಕಂಡಿತು. ಅವನಿಗೆ ನಗುವುದನ್ನು ತಡೆಯಲಾಗಲಿಲ್ಲ, ಮತ್ತು ನಗುವನ್ನು ಅಡಗಿಸುವಾಗ ಅವನಿಂದ ಒಂದು ಗೊರಕೆ ಹೊರಬಿತ್ತು. ಅಗಸೆ ಬಣ್ಣದ ಕೂದಲಿನ ಹುಡುಗಿ ಸ್ವಲ್ಪ ಬೆಚ್ಚಿಬಿದ್ದು, ಅವನತ್ತ ಅನುಮಾನದಿಂದ ನೋಡಿದಳು. ಆದರೆ ಡನ್ನೋ ಕಣ್ಣುಗಳನ್ನು ಮುಚ್ಚಿಕೊಂಡು ಮಲಗಿರುವಂತೆ ನಟಿಸಿದನು. ಆ ಇಬ್ಬರು ಮೈಟ್ಸ ಹುಡುಗಿಯರು ಅವನ ಹಾಸಿಗೆಯ ಕಡೆ ಮೆಲ್ಲಗೆ ಹೆಜ್ಜೆ ಹಾಕುತ್ತಾ ಬಂದು, ಸ್ವಲ್ಪ ದೂರದಲ್ಲಿ ನಿಂತಿದ್ದನ್ನು ಅವನು ಕೇಳಿದನು.

“ಅವನು ಏನೋ ಹೇಳಿದಂತೆ ನನಗೆ ಕೇಳಿಸಿತು," ಎಂದು ಅವರಲ್ಲೊಬ್ಬಳು ಪಿಸುಗುಟ್ಟಿದಳು. “ಆದರೆ ಅದು ನನ್ನ ಭ್ರಮೆಯಾಗಿರಬೇಕು. ಅವನು ಯಾವಾಗ ಎಚ್ಚರಗೊಳ್ಳುತ್ತಾನೆ ಎಂದು ನಿನಗೆ ಅನ್ನಿಸುತ್ತದೆ? ನಿನ್ನೆಯ ಸಂಜೆಯಿಂದಲೂ ಅವನು ಪ್ರಜ್ಞಾಹೀನನಾಗಿ ಇಲ್ಲಿ ಮಲಗಿದ್ದಾನೆ.”

“ನಾವು ಅವನನ್ನು ಎಬ್ಬಿಸಬಾರದೆಂದು ಹನಿಸಕಲ್ ಹೇಳಿದ್ದಾಳೆ," ಎಂದು ಮತ್ತೊಬ್ಬಳು ಉತ್ತರಿಸಿದಳು. “ಅವನು ತಾನಾಗಿಯೇ ಎದ್ದಾಗ ಅವಳನ್ನು ಕರೆಯುವಂತೆ ನನಗೆ ಹೇಳಿದ್ದಳು.”
“ಹನಿಸಕಲ್ ಯಾರಿರಬಹುದು?" ಎಂದು ಡನ್ನೋ ಯೋಚಿಸಿದನು, ಆದರೆ ತಾನು ಅವರ ಮಾತು ಕೇಳಿಸಿಕೊಂಡಿದ್ದೇನೆ ಎಂಬ ಯಾವ ಸೂಚನೆಯನ್ನೂ ಅವನು ನೀಡಲಿಲ್ಲ.
“ಎಂಥ ಧೈರ್ಯಶಾಲಿ ಹುಡುಗ!” ಆ ಧ್ವನಿ ಮತ್ತೆ ಕೇಳಿಸಿತು.
‘ಬಲೂನಿನಲ್ಲಿ ಆಕಾಶಕ್ಕೆ ಮೇಲೇರಿ ಹಾರಿದನೆಂದು ಯೋಚಿಸಿದರೆ ಸಾಕು!”
ಡನ್ನೋ ಸಂತೋಷದಿಂದ ನಗದಂತೆ ತನ್ನ ಬಾಯಿಯನ್ನು ಮುಚ್ಚಲು ಸಾಧ್ಯವಾದಷ್ಟೂ ಪ್ರಯತ್ನಿಸಿದನು.
“ಅವನು ಎಚ್ಚರವಾದ ಮೇಲೆ ನಾನು ಮತ್ತೆ ಬರುತ್ತೇನೆ," ಅವರಲ್ಲಿ ಒಬ್ಬಳು ಹೇಳಿದಳು.
“ಬಲೂನಿನ ಬಗ್ಗೆ ಅವನನ್ನು ಕೇಳಲು ನನಗೆ ತುಂಬಾ ಆಸೆಯಾಗಿದೆ! ಅವನ ಮೆದುಳಿಗೆ ಪೆಟ್ಟಾಗಿದ್ದರೆ ಏನು ಮಾಡುವುದು?"
ಮೂರ್ಖಳೇ! ಎಂದು ಡನ್ನೋ ಯೋಚಿಸಿದನು. ನನಗೆ ಅಂತಹದೇನೂ ಆಗಿಲ್ಲ!
ಅಗಸೆಬಣ್ಣದ ಕೂದಲಿನ ಮೈಟ್ಸ ಹುದುಗಿ ವಿದಾಯ ಹೇಳಿ ಹೊರಗೆ ಹೋದಳು. ಅದರ ನಂತರ ಕೋಣೆ ತುಂಬಾ ಶಾಂತವಾಗಿತ್ತು. ಬಹಳ ಹೊತ್ತು ಡನ್ನೋ ಕಣ್ಣುಗಳನ್ನು ಮುಚ್ಚಿಕೊಂಡೇ ಮಲಗಿದ್ದನು, ಅತಿ ಸಣ್ಣ ಶಬ್ದವನ್ನಾದರೂ ಹಿಡಿಯಲು ತುಂಬಾ ಪ್ರಯತ್ನಿಸುತ್ತಿದ್ದನು. ಕೊನೆಗೆ ಅವನು ಒಂದು ಕಣ್ಣನ್ನು ತೆರೆದು, ನೀಲಿ ಕಣ್ಣುಗಳ ಮೈಟ್ಸಹುಡುಗಿ ತನ್ನ ಮೇಲೆ ಬಾಗಿಕೊಂಡಿರುವುದನ್ನು ನೋಡಿದನು. ಅವಳು ನಕ್ಕಳು, ನಂತರ ಹುಬ್ಬು ಗಂಟಿಕ್ಕಿ ಅವನತ್ತ ಬೆರಳು ಅಲ್ಲಾಡಿಸಿದಳು.
“ನೀನು ಯಾವಾಗಲೂ ಹೀಗೆ ಎಚ್ಚರಗೊಳ್ಳುತ್ತೀಯಾ — ಒಂದು ಕಣ್ಣಿನ ನಂತರ ಮತ್ತೊಂದು ಕಣ್ಣನ್ನು ತೆರೆಯುತ್ತಾ?" ಅವಳು ಕೇಳಿದಳು.
ಡನ್ನೋ ತಲೆಯಾಡಿಸಿ ಮತ್ತೊಂದು ಕಣ್ಣನ್ನೂ ತೆರೆದನು.
“ಹಾಗಾದರೆ ನೀನು ಮಲಗಿರಲಿಲ್ಲವೇ?"
“ಹೌದು, ಮಲಗಿದ್ದೆ, ಈಗಷ್ಟೇ ಎಚ್ಚರವಾಯಿತು.”
ಅವಳು ಅವನ ತುಟಿಯ ಮೇಲೆ ಬೆರಳಿಟ್ಟು ಹೇಳದಿದ್ದರೆ ಡನ್ನೋ ಇನ್ನೂ ಮಾತನ್ನಾಡುತ್ತಲೇ ಇರುತ್ತಿದ್ದನು:
“ಶ್ ಶ್. ನೀನು ಮಾತನಾಡಬಾರದು.
ನಿನ್ನ ಆರೋಗ್ಯ ಸರಿ ಇಲ್ಲ.”
“ಇಲ್ಲ, ನನಗೇನೂ ಆಗಿಲ್ಲ.”
“ನಿನಗೆ ಹೇಗೆ ಗೊತ್ತು? ನೀನೇನು ಡಾಕ್ಟರನೇ?“



"ಇಲ್ಲ.'
“ಹಾಗಾದರೆ ಅಂಥ ಮಾತನ್ನು ಹೇಳುವ ಯಾವುದೇ ಹಕ್ಕು ನಿನಗಿಲ್ಲ. ನಾನು ಡಾಕ್ಟರರನ್ನು ಕರೆಯುವವರೆಗೆ ನೀನು ಅಲುಗಾಡದೆ ಮಲಗಿರಬೇಕು. ನಿನ್ನ ಹೆಸರೇನು?"
“ಡನ್ನೋ. ನಿನ್ನ ಹೆಸರೇನು?"
“ಕಾರ್ನ್‌ಫ್ಲವರ್."
“ಎಷ್ಟು ಸುಂದರವಾದ ಹೆಸರು!” ಎಂದು ಡನ್ನೋ ಹೇಳಿದನು.
“ನಿನಗೆ ಇಷ್ಟವಾಯಿತೆಂದು ನನಗೆ ಸಂತೋಷವಾಗಿದೆ. ನೀನು ತುಂಬಾ ಸುಸಂಸ್ಕೃತನಾದ ಪುಟ್ಟ ಹುಡುಗನಂತೆ ಕಾಣುತ್ತೀಯ."
ಡನ್ನೋ ಮುಗುಳು ನಕ್ಕನು. ಯಾರಾದರೂ ತನ್ನನ್ನು ಹೊಗಳುವುದನ್ನು ಕೇಳುವುದು ಅವನಿಗೆ ಸಂತೋಷ ತರುತ್ತಿತ್ತು. ಹೊಗಳಿಸಿಕೊಳ್ಳುವುದಕ್ಕಿಂತ ಬೈಗಳು ಕೇಳುವದಕ್ಕೆ ಅವನು ಹೆಚ್ಚು ಒಗ್ಗಿಕೊಂಡಿದ್ದನು. ಕೋಣೆಯಲ್ಲಿ ಯಾವುದೇ ಮೈಟ್ಸ ಹುಡುಗರು ಇರದ ಕಾರಣ, ಹುಡುಗಿಯೊಬ್ಬಳೊಂದಿಗೆ ಮಾತನಾಡಿದ್ದಕ್ಕಾಗಿ ಗೇಲಿ ಮಾಡಿಸಿಕೊಳ್ಳುವ ಯಾವುದೇ ಅಪಾಯವಿಲ್ಲದೆ ಅವನು ಅವಳೊಂದಿಗೆ ಸೌಜನ್ಯದಿಂದ ಮಾತನಾಡತೊಡಗಿದನು.





“ಆ ಇನ್ನೊಬ್ಬಳ ಹೆಸರೇನು?" ಎಂದು ಅವನು ಕೇಳಿದನು.
“ಯಾವ ಇನ್ನೊಬ್ಬಳು?"
“ನೀನು ಯಾರೊಂದಿಗೆ ಮಾತನಾಡುತ್ತಿದ್ದೆಯೋ ಅವಳು. ಅಗಸೆಬಣ್ಣದ ಕೂದಲಿನ ಆ ಸುಂದರಿ.”
“ಓಹ್!” ಎಂದು ಕಾರ್ನ್‌ಫ್ಲವರ್ ಉದ್ಗರಿಸಿದಳು. “ಹಾಗಾದರೆ ನೀನು ಮಲಗಿರಲಿಲ್ಲ!”
“ಹೌದು, ನಾನು ಮಲಗಿದ್ದೆ. ಒಂದು ಕ್ಷಣ ಕಣ್ಣು ತೆರೆದು, ಮತ್ತೆ ಮಲಗಿಬಿಟ್ಟೆ.”
‘ನಿನಗೆ ನಾಚಿಕೆಯಾಗಬೇಕು!” ಎಂದು ಕಾರ್ನ್‌ಫ್ಲವರ್ ಅವನತ್ತ ತಲೆ ಅಲ್ಲಾಡಿಸುತ್ತಾ, ಹುಬ್ಬುಗಂಟಿಕ್ಕಿ ಹೇಳಿದಳು. ‘ಹಾಗಾದರೆ ನಾನು ಸುಂದರಿಯಲ್ಲ ಎಂದು ನೀನು ಭಾವಿಸುತ್ತೀಯಾ?"
“ಖಂಡಿತವಾಗಿಯೂ ಇಲ್ಲ!” ಎಂದು ಡನ್ನೋ ಗಾಬರಿಯಿಂದ ಹೇಳಿದನು. “ನೀನೂ ಸುಂದರಿಯೇ.”
“ಯಾರು ಹೆಚ್ಚು ಸುಂದರಿ?"
“ನೀನು. ಮತ್ತು ಅವಳು. ನೀವಿಬ್ಬರೂ.”
“ನೀನು ತುಂಟ, ಪುಟ್ಟ ಸುಳ್ಳುಗಾರ, ಆದರೆ ನಾನು ನಿನ್ನನ್ನು ಕ್ಷಮಿಸುತ್ತೇನೆ," ಎಂದು ಕಾರ್ನ್‌ಫ್ಲವರ್ ಹೇಳಿದಳು. “ಅವಳ ಹೆಸರು ಸ್ನೋಡ್ರಾಪ್. ನೀನು ಅವಳನ್ನು ಮತ್ತೆ ನೋಡುತ್ತೀಯ. ಆದರೆ ನಾನು ನಿನ್ನೊಂದಿಗೆ ಮಾತನಾಡಬಾರದು, ಅದು ನಿನಗೆ ಒಳ್ಳೆಯದಲ್ಲ. ಸುಮ್ಮನೆ ಮಲಗಿರು ಮತ್ತು ಹಾಸಿಗೆಯಿಂದ ಏಳುವ ಧೈರ್ಯ ಮಾಡಬೇಡ. ನಾನು ಹೋಗಿ ಹನಿಸಕಲ್‌ಳನ್ನು ಕರೆತರುತ್ತೇನೆ.”

“ಹನಿಸಕಲ್ ಯಾರು?"
“ಡಾಕ್ಟರ. ಅವಳು ನಿನ್ನನ್ನು ಗುಣಪಡಿಸುತ್ತಾಳೆ.”
ಕಾರ್ನ್‌ಫ್ಲವರ್ ಹೊರಗೆ ಹೋದಳು. ಡನ್ನೋ ತಕ್ಷಣವೇ ಹಾಸಿಗೆಯಿಂದ ಜಿಗಿದೆದ್ದು ತನ್ನ ಬಟ್ಟೆಗಳನ್ನು ಹುಡುಕತೊಡಗಿದನು. ತಾನು ಸಾಧ್ಯವಾದಷ್ಟು ವೇಗವಾಗಿ ಓಡಿಹೋಗಬೇಕೆಂದು ಅವನು ಉದ್ದೇಶಿಸಿದ್ದನು, ಏಕೆಂದರೆ ಡಾಕ್ಟರ ತಮ್ಮ ರೋಗಿಗಳಿಗೆ ಔಡಲ ಎಣ್ಣೆ ಕೊಡುವುದರಲ್ಲಿ ಮತ್ತು ಅವರಿಗೆ ಅಯೋಡಿನ್ ಹಚ್ಚುವುದರಲ್ಲಿ ತುಂಬಾ ಆಸಕ್ತಿ ಹೊಂದಿರುತ್ತಾರೆ ಎಂದು ಅವನಿಗೆ ಅನ್ನಿಸುತ್ತಿತ್ತು. ಅವನಿಗೆ ತನ್ನ ಬಟ್ಟೆಗಳು ಸಿಗಲಿಲ್ಲ, ಆದರೆ ಗೋಡೆಗೆ ಒರಗಿಸಿ ಬೆಂಚಿನ ಮೇಲಿದ್ದ ಒಂದು ಗೊಂಬೆ ಕಂಡಿತು.
ಗೊಂಬೆಯನ್ನು ಸೀಳಿ ಅದರೊಳಗೆ ಏನು ತುಂಬಿದ್ದಾರೆ — ಮರದ ಪುಡಿಯೋ ಅಥವಾ ಅರಳೆಯೋ — ಎಂದು ತಿಳಿದುಕೊಳ್ಳುವುದು ಅವನ ಮೊದಲ ಆಲೋಚನೆಯಾಗಿತ್ತು. ಅವನು ತನ್ನ ಬಟ್ಟೆಗಳನ್ನೆಲ್ಲ ಮರೆತು ಚಾಕುವನ್ನು ಹುಡುಕತೊಡಗಿದನು, ಆದರೆ ಅಷ್ಟರಲ್ಲಿ ಕನ್ನಡಿಯಲ್ಲಿ ತನ್ನನ್ನೇ ತಾನು ನೋಡಿಕೊಂಡನು. ಅವನು ಗೊಂಬೆಯನ್ನು ನೆಲಕ್ಕೆ ಎಸೆದು ಕನ್ನಡಿಯಲ್ಲಿ ತನ್ನ ಮುಖವನ್ನು ಚಿತ್ರವಿಚಿತ್ರವಾಗಿ ಮಾಡತೊಡಗಿದನು. ಸಾಕಷ್ಟು ಮುಖಭಾವಗಳನ್ನು ಮಾಡಿದ ನಂತರ, ಅವನು ಹೇಳಿದನು: “ನಾನು ನೋಡಲು ಅಷ್ಟೇನೂ ಕೆಟ್ಟವನಲ್ಲ; ನನ್ನ ಮುಖ ಅಷ್ಟು ದುಂಡಗಿಲ್ಲ.”
ಅಷ್ಟರಲ್ಲಿ ಬಾಗಿಲಿನ ಹೊರಗೆ ಹೆಜ್ಜೆಗಳ ಸದ್ದು ಕೇಳಿಸಿತು. ಡನ್ನೋ ಹಾಸಿಗೆಯೊಳಗೆ ಧುಮುಕಿ ಬ್ಲ್ಯಾಂಕೆಟನ್ನು ತನ್ನ ಮೇಲೆ ಎಳೆದುಕೊಂಡನು. ಕೋಣೆಯೊಳಗೆ ಕಾರ್ನ್‌ಫ್ಲವರ್ ಮತ್ತು ಇನ್ನೊಬ್ಬ ಮೈಟ್ಸ ಹುಡುಗಿ ಬಂದರು; ಮೈಟ್ಸ ಹುಡುಗಿ ಬಿಳಿ ಕೋಟು ಮತ್ತು ಟೊಪ್ಪಿಗೆ ಧರಿಸಿದ್ದಳು ಹಾಗೂ ಅವಳ ಕೈಯಲ್ಲಿ ಒಂದು ಚಿಕ್ಕ ಕಂದು ಬಣ್ಣದ ಚೀಲವಿತ್ತು. ಅವಳ ಕೆನ್ನೆಗಳು ದುಂಡಾಗಿ ಕೆಂಪಾಗಿದ್ದವು ಮತ್ತು ಚೌಕಟ್ಟಿನ ಕನ್ನಡಕದ ಹಿಂದೆ ಕಟ್ಟುನಿಟ್ಟಾಗಿ ನೋಡುವ ಬೂದು ಕಣ್ಣುಗಳಿದ್ದವು. ಇವಳೇ ಡಾಕ್ಟರಳಿರಬೇಕು ಎಂದು ಡನ್ನೋ ಯೋಚಿಸಿದನು.
ಹನಿಸಕಲ್ ಡನ್ನೋನ ಹಾಸಿಗೆಯ ಬಳಿಗೆ ಕುರ್ಚಿಯನ್ನು ಎಳೆದುಕೊಂಡು ಅದರ ಮೇಲೆ ತನ್ನ ಚೀಲವನ್ನಿಟ್ಟು, ತಲೆಯನ್ನು ಅಲ್ಲಾಡಿಸುತ್ತಾ ಹೇಳಿದಳು:
“ಅಯ್ಯೋ ದೇವರೇ, ನೀವು ಮೈಟ್ಸ ಹುಡುಗರು ತುಂಬಾ ಕಿಡಿಗೇಡಿಗಳು! ಯಾವಾಗಲೂ ಏನಾದರೂ ಕಿತಾಪತಿ ಮಾಡುತ್ತಲೇ ಇರುತ್ತೀರಿ! ಈಗ ಹೇಳು, ಆ ಬಲೂನಿನಲ್ಲಿ ಮೇಲಕ್ಕೆ ಹೋಗುವ ಯೋಚನೆ ಹೇಗೆ ಬಂದಿತು? ಹೋಗಲಿ, ಒಂದು ಮಾತೂ ಬೇಡ! ನೀನು ಏನು ಹೇಳುತ್ತೀಯೋ ನನಗೆ ಗೊತ್ತು: “ನಾನು ಮತ್ತೆಂದೂ ಹೀಗೆ ಮಾಡುವುದಿಲ್ಲ!” ಎಲ್ಲ ಮೈಟ್ಸ ಹುಡುಗರು ಹಾಗೆಯೇ ಹೇಳುತ್ತಾರೆ, ಆದರೆ ಮುಂದಿನ ಕ್ಷಣದಲ್ಲಿಯೇ ಮತ್ತೇನಾದರೂ ಕಿತಾಪತಿ ಮಾಡಲು ಶುರುಮಾಡುತ್ತಾರೆ.”
ಹನಿಸಕಲ್ ತನ್ನ ಚೀಲವನ್ನು ತೆರೆದಳು; ಕೋಣೆಯೆಲ್ಲ ಅಯೋಡಿನ್ ಮತ್ತು ಇತರ ಔಷಧಿಗಳ ವಾಸನೆಯಿಂದ ತುಂಬಿತು. ಡನ್ನೋ ನಡುಗಿದನು. ಹನಿಸಕಲ್ ಅವನ ಕಡೆ ತಿರುಗಿದಳು.



“ಕುಳಿತುಕೋ," ಎಂದು ಅವಳು ಹೇಳಿದಳು.
ಡನ್ನೋ ಹಾಸಿಗೆಯಿಂದ ಒಂದು ಕಾಲನ್ನು ಕೆಳಗೆ ಇಟ್ಟನು.
“ಹಾಸಿಗೆಯಲ್ಲೇ ಇಡು!” ಎಂದು ಅವಳು ಕಿರಿಕಿರಿಯಾಗಿ ಹೇಳಿದಳು.



“ನಾನು ನಿನಗೆ ಕುಳಿತುಕೊಳ್ಳಲು ಹೇಳಿದ್ದೆ.”
ಡನ್ನೋ ಭುಜಗಳನ್ನು ಎತ್ತಿ, ಕುಳಿತುಕೊಂಡನು.
“ಭುಜಗಳನ್ನು ಎತ್ತಬೇಡ," ಎಂದು ಹನಿಸಕಲ್ ಹೇಳಿದಳು. “ನನಗೆ ನಿನ್ನ ನಾಲಿಗೆಯನ್ನು ತೋರಿಸು.”
‘ಏಕೆ?"
“ದಯವಿಟ್ಟು ಪ್ರಶ್ನೆ ಮಾಡಬೇಡ. ನಿನ್ನ ನಾಲಿಗೆಯನ್ನು ತೋರಿಸು.”
ಡನ್ನೋ ತನ್ನ ನಾಲಿಗೆಯನ್ನು ಹೊರಗೆ ಚಾಚಿದನು.
“'ಆ ಆ ಆ ಹ್' ಎಂದು ಹೇಳು.”
‘ಆ ಆ ಆಹ್," ಎಂದು ಡನ್ನೋ ಹೇಳಿದನು.

ಹನಿಸಕಲ್ ತನ್ನ ಚೀಲದಿಂದ ಕಟ್ಟಿಗೆಯ ತುತ್ತೂರಿಯನ್ನು ತೆಗೆದುಕೊಂಡು ಅವನ ಹೃದಯ ಮತ್ತು ಶ್ವಾಸಕೋಶಗಳ ಸಪ್ಪಳವನ್ನು ಆಲಿಸಿದಳು.

"ದಯವಿಟ್ಟು ಆಳವಾಗಿ ಉಸಿರಾಡಿಸು."

ಡನ್ನೋ ಉಗಿಬಂಡಿಯ ಎಂಜಿನಿನಂತೆ ಉಸಿರಾಡಿಸಲು ಆರಂಭಿಸಿದನು.

"ದಯವಿಟ್ಟು ಉಸಿರಾಡಿಸುವದನ್ನು ನಿಲ್ಲಿಸು."

"ಹೀ ಹೀ!" ಎಂದು ಡನ್ನೋ ಕಿಲಕಿಲನೆ ನಕ್ಕನು.


"ನೀನು ಯಾವುದಕ್ಕೆ ನಗುತ್ತಿದ್ದೀಯ? ನಾನು ಏನಾದರೂ ತಮಾಷೆಯಾಗಿ ಹೇಳಿದ್ದೇನೆಂದು ನನಗನ್ನಿಸುವುದಿಲ್ಲ."

"ನಾನು ಉಸಿರಾಡಿಸುವದನ್ನು ಹೇಗೆ ನಿಲ್ಲಿಸಲಿ?" ಎಂದು ಅವನು ಇನ್ನೂ ನಗುತ್ತಾ ಹೇಳಿದನು.

"ನೀನು ಸಂಪೂರ್ಣವಾಗಿ ಉಸಿರಾಡಿಸುವದನ್ನು ನಿಲ್ಲಿಸಲು ಸಾಧ್ಯವಿಲ್ಲ, ಆದರೆ ಒಂದು ನಿಮಿಷದ ಮಟ್ಟಿಗೆ ನಿಲ್ಲಿಸಬಹುದು."

"ಹಾಗಾದರೆ ಅದು ಸಾಧ್ಯ," ಎಂದು ಡನ್ನೋ ಹೇಳಿ, ಉಸಿರಾಡಿಸುವದನ್ನು ನಿಲ್ಲಿಸಿದನು.

ರೋಗಪರೀಕ್ಷೆ ಮುಗಿದ ನಂತರ, ಹನಿಸಕಲ್ ಮೇಜಿನ ಬಳಿ ಹೋಗಿ ಒಂದು ಔಷಧಿ ಚೀಟಿಯನ್ನು ಬರೆದಳು.



‘ರೋಗಿಯ ತೋಳಿಗೆ ಏಟು ಬಿದ್ದಿದೆ," ಎಂದು ಅವಳು ಕಾರ್ನ್‌ಫ್ಲವರ್‌ಗೆ ಹೇಳಿದಳು. “ಔಷಧ ಅಂಗಡಿಗೆ ಹೋಗಿ ಒಂದು ಜೇನು ಪ್ಲಾಸ್ಟರ್ ಕೊಂಡುಕೊ. ಅದರ ಒಂದು ತುಂಡನ್ನು ಕತ್ತರಿಸಿ ಅವನ ಭುಜದ ಮೇಲೆ ಅಂಟಿಸು. ಮತ್ತು ಅವನು ಎದ್ದು ನಿಲ್ಲದಂತೆ ನೋಡಿಕೊ. ಅವನು ಎದ್ದು ನಿಂತರೆ ನಿನ್ನ ಎಲ್ಲಾ ಪಾತ್ರೆಗಳನ್ನು ಒಡೆದು ಹಾಕುತ್ತಾನೆ ಮತ್ತು ಯಾರಾದರೂ ಸಿಕ್ಕರೆ ಅವರ ತಲೆಗೆ ಪೆಟ್ಟು ಕೊಡುತ್ತಾನೆ. ಮೈಟ್ಸ ಹುಡುಗರ ವಿಷಯದಲ್ಲಿ ಬಹಳ ಕಟ್ಟುನಿಟ್ಟಾಗಿರಬೇಕು.”

ಹನಿಸಕಲ್ ತನ್ನ ಟ್ರಂಪೆಟ್‌ನ್ನು ದೂರವಿಟ್ಟು, ಡನ್ನೋನತ್ತ ಒಂದು ಕ್ಷಣ ಕೋಪದಿಂದ ನೋಡಿದಳು ಮತ್ತು ಹೊರಹೋದಳು.

ಕಾರ್ನ್‌ಫ್ಲವರ್ ಔಷಧ ಚೀಟಿಯನ್ನು ಎತ್ತಿಕೊಂಡಳು.

“ಅವಳು ಹೇಳಿದ್ದನ್ನು ಕೇಳಿದೆಯಾ? ನೀನು ಎದ್ದು ನಿಲ್ಲಬಾರದು," ಎಂದು ಕಾರ್ನ್‌ಫ್ಲವರ್ ಹೇಳಿದಳು.

ಡನ್ನೋ ಮುಖ ಸಪ್ಪಗೆ ಮಾಡಿಕೊಂಡನು.

“ಈಗ ಮುಖ ಸಪ್ಪಗೆ ಮಾಡಬೇಡ. ನಿನ್ನ ಬಟ್ಟೆಗಳನ್ನು ಹುಡುಕಲು ಪ್ರಯತ್ನಿಸಬೇಡ, ಅವುಗಳನ್ನು ಸುರಕ್ಷಿತವಾಗಿ ಬಚ್ಚಿಟ್ಟಿದ್ದೇನೆ," ಎಂದು ಕಾರ್ನ್‌ಫ್ಲವರ್ ಹೇಳಿದಳು ಹಾಗು ಔಷಧ ಚೀಟಿಯನ್ನು ಕೈಯಲ್ಲಿ ಹಿಡಿದುಕೊಂಡು ಕೋಣೆಯಿಂದ ಹೊರಬಿದ್ದಳು.





Н. Носов
НА НОВОМ МЕСТЕ
на языке хинди

N.Nosov
IN A STRANGE PLACE
in Hindi





